ನಾಗ ಎಚ್‌ ಹುಬ್ಳಿ

ಕಲೆ: ಗಣೇಶ್ ಆಚಾರ್ಯ

# ಒಂದು ನಮಸ್ಕಾರ

ಒಬ್ಬ ವ್ಯಕ್ತಿಯು ಮಂಜುಗಡ್ಡೆ ತಯಾರಿಸುವ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ. ಒಂದು ದಿನ ಆತ ಕಾರ್ಖಾನೆ ಮುಚ್ಚುವ ಸಮಯಕ್ಕಿಂತ ಸ್ವಲ್ಪ ಮೊದಲು ಫ್ರೀಜರ್ ಕೋಣೆಯನ್ನು ಒಮ್ಮೆ ನೋಡಿಕೊಂಡು ಬರೋಣ ಎಂದು ಅದರತ್ತ ಒಬ್ಬನೇ ಸಾಗಿದ. ಪ್ರಮಾದವಶಾತ್ ಅದರ ಬಾಗಿಲು ಒಳಗಿನಿಂದ ತೆರೆಯಲಾಗದಂತೆ ಮುಚ್ಚಿಕೊಂಡಿತು. ಆತ ಸಿಕ್ಕಿಹಾಕಿಕೊಂಡ. ಕಾರ್ಖಾನೆಯ ಎಲ್ಲ ಕಾರ್ಮಿಕರೂ ಮನೆಗೆ ಹೊರಡುವ ಗಡಿಬಿಡಿಯಲ್ಲಿದ್ದರು. ಹಾಗಾಗಿ ಯಾರೂ ಆ ವ್ಯಕ್ತಿ ಫ್ರೀಜರ್ ಕೋಣೆಯಲ್ಲಿ ಸಿಕ್ಕಿಹಾಕಿಕೊಂಡಿದ್ದನ್ನು ಗಮನಿಸಲಿಲ್ಲ.

ಫ್ರೀಜರ್ ಕೋಣೆಯ ಬಾಗಿಲನ್ನು ತೆರೆಯುವ ಪ್ರಯತ್ನ ಮಾಡಿದರೂ ಅದು ಆ ವ್ಯಕ್ತಿಯಿಂದ ಸಾಧ್ಯವಾಗಲಿಲ್ಲ. ಆತ ಯೋಚಿಸತೊಡಗಿದ. ಎರಡು ಮೂರು ಗಂಟೆಗಳಲ್ಲಿ ತನ್ನ ಶರೀರವು ಮಂಜುಗಡ್ಡೆಯಾಗಿಬಿಡುತ್ತದೆ; ತನ್ನ ಸಾವನ್ನು ತಡೆಯುವವರು ಯಾರೂ ಇಲ್ಲ ಎಂಬುದು ಆತನಿಗೆ ಖಾತರಿಯಾಯಿತು. ಆತ ಒಳ್ಳೆಯ ಮನಸ್ಸಿನಿಂದ, ಭಕ್ತಿಯಿಂದ ದೇವರ ಪ್ರಾರ್ಥನೆ ಮಾಡತೊಡಗಿದ. ಸ್ವಲ್ಪ ಹೊತ್ತಿನಲ್ಲಿಯೇ ಆತನಿಗೆ ಪ್ರಜ್ಞೆ ತಪ್ಪಿತು.

ಸುಮಾರು ಒಂದು ತಾಸಿನ ನಂತರ ಆ ಫ್ರೀಜರ್ ಕೋಣೆಯ ಬಾಗಿಲನ್ನು ಕಾರ್ಖಾನೆಯ ಕಾವಲುಗಾರ ತೆರೆದು ಒಳಗೆ ಪ್ರವೇಶಿಸಿದಾಗ, ಅವನಿಗೆ ಮೂರ್ಛೆ ಹೋಗಿದ್ದ ಈ ವ್ಯಕ್ತಿ ಕಾಣಿಸಿದ. ಕೂಡಲೇ ಕಾವಲುಗಾರ ಆತನನ್ನು ಫ್ರೀಜರ್ ಕೋಣೆಯಿಂದ ಹೊರಕ್ಕೆ ತಂದ ಮತ್ತು ಆತನನ್ನು ತನ್ನ ಹೆಗಲಿನ ಮೇಲೆ ಹಾಕಿಕೊಂಡು ಹೀಟರ್ (ಬಿಸಿ ಮಾಡುವ ಯಂತ್ರ) ಹತ್ತಿರ ತೆಗೆದುಕೊಂಡು ಹೋದ.

ಸ್ವಲ್ಪ ಹೊತ್ತಿನ ನಂತರ ಆ ವ್ಯಕ್ತಿಯ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿತು. ಆತ ಕಣ್ಣು ತೆರೆದ. ಎದುರಿನಲ್ಲಿ ಕಾರ್ಖಾನೆಯ ಕಾವಲುಗಾರ ನಿಂತಿದ್ದ. ಆತನಿಗೆ ಆಶ್ಚರ್ಯವಾಯಿತು. ತಾನು ಎಲ್ಲಿದ್ದೇನೆ ಎಂಬುದನ್ನು ತಿಳಿದುಕೊಳ್ಳಲು ಒಮ್ಮೆ ಸುತ್ತಲೂ ಕಣ್ಣಾಡಿಸಿದ. ಆತನಿಗೆ ಸರಿಯಾಗಿ ಅರ್ಥವಾಲಿಲ್ಲ. ಹೀಟರ್‌ನ ಮುಂದೆ ಇರುವುದಷ್ಟೇ ಅರ್ಥವಾಯಿತು. ಆತ ಆ ಕಾವಲುಗಾರನನ್ನು ಪ್ರಶ್ನಿಸಿದ, 'ನೀನು ಇಲ್ಲಿಗೆ ಹೇಗೆ ಬಂದೆ?'

ಕಾವಲುಗಾರ ಆ ಪ್ರಶ್ನೆಗೆ ಉತ್ತರಿಸುತ್ತ, ನಡೆದ ಘಟನೆಯನ್ನು ವಿವರಿಸಿದ. 'ಸಾಹೇಬರೇ, ನಾನು ಅನೇಕ ವರ್ಷಗಳಿಂದ ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಇಲ್ಲಿ ಕೆಲಸ ಮಾಡುವ ನೂರಾರು ಅಧಿಕಾರಿಗಳು ಹಾಗೂ ಕೆಲಸಗಾರರು ನನ್ನ ಮುಂದಿನಿಂದ ಪ್ರತಿದಿನವೂ ಹಾದುಹೋಗುತ್ತಾರೆ. ಆದರೆ, ನೀವು ಅವರೆಲ್ಲರಿಗಿಂತ ಸಂಪೂರ್ಣ ಭಿನ್ನವಾಗಿದ್ದೀರಿ. ನೀವು ಅಧಿಕಾರಿಯಾಗಿದ್ದರೂ ಪ್ರತಿದಿನ ನಾನು ನಿಮಗೆ 'ನಮಸ್ಕಾರ' ಹೇಳಿದಾಗ ನೀವು ನಸುನಗೆ ಬೀರುತ್ತ ನನ್ನ ನಮಸ್ಕಾರಕ್ಕೆ ಪ್ರತಿಕ್ರಿಯೆ ನೀಡುತ್ತೀರಿ ಮತ್ತು ನನ್ನ ಯೋಗಕ್ಷೇಮ ವಿಚಾರಿಸುತ್ತೀರಿ. ನನ್ನನ್ನು ನಿರ್ಲಕ್ಷಿಸಿ ನೀವು ಯಾವತ್ತೂ